SRI B. BASAVALINGAPPA.—Anybody can give first information under criminal law,

SRI S. R. BOMMAI.—Anybody has got right to put thumb impression but not under thumb impression of a wrong person. ಅದು ಆಗುವುದಿಲ್ಲ. ತಾವು ಕೊಡಬಹುದು. ತಮ್ಮ ಸಿಗ್ನೇಚರ್‌ನಲ್ಲಿ ಕಂಪ್ಲೈಂಟ್ ಕೊಡತಕ್ಕಂಥ ಹಕ್ಕು ಇದೆ, ಪ್ರತಿಯೊಬ್ಬ ನಾಗರೀಕರಿಗೂ ಇದೆ. ನಾನು ಈ ಸಮಯದಲ್ಲಿ ಇಷ್ಟೇ ಹೇಳುತ್ತೇನೆ. ಮಾನ್ಯ ಅಧ್ಯಕ್ಷರೆ, ಸರ್ಕಾರದ ಇಚ್ಛೆ ಸತ್ಯವನ್ನು ಹಂಡುಕಿ ತೆಗೆದು ತಪ್ಪಿತಸ್ಥರಿಗೆ ಶಿಕ್ಷೆ ಕೊಡತಕ್ಕದ್ದು ಆಗಿದೆ. ಸಿಒಡಿ ಎನ್‌ಕ್ವೈರಿ ಮಾಡಂತ್ತಾ ಇದ್ದೇವೆ, ಇವತ್ತಿನಿಂದ ವ್ಯಾರಂಭವಾಗುತ್ತದೆ. ಡಿಪ್ಟಿಕ್ಟ್ ಮ್ಯಾಜಿಸ್ಟೇಟ್ ಎನ್‌ಕ್ವೈರಿ ನಡೆದಿದೆ. ಅದಕ್ಕಾಗಿ, ರಿಪೋರ್ಟ್‌ಗಾಗಿ ಕಾಯಂತ್ತಾ ಇದ್ದೇವೆ. ಅವರ ರಿಪೋರ್ಟ್‌ಮೇಲೆ ಏನೇನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ. ನ್ಯಾಯಾಂಗ ತನಿಖೆ ಅವಶ್ಯವಿಲ್ಲ, ಅದನ್ನು ಒಪ್ಪಲಿಕ್ಕೆ ಆಗುವುದಿಲ್ಲ.

ಶ್ರೀ ಎಂ. ವಂಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಅಧ್ಯಕ್ಷರೇ, ನಾನು ಏನು ಹೇಳುವುದು ಅಂದರೆ, ಸರ್ಕಾರದವರು ಪುನಃ ಪೋಸ್ಟ್‌ಮಾರ್ಟಂ ಮಾಡುವುದಕ್ಕೂ ಒಪ್ಪುವುದಿಲ್ಲ, ಪರಿಹಾರ ಕೊಡಲಿಕ್ಕೂ ಒಪ್ಪುವುದಿಲ್ಲ, ಆಮೇಲೆ ಸೆಕ್ಷನ್ ೩೦೨ ಪ್ರಕಾರ ಮರ್ಡರ್ ಕೇಸ್ ರಿಜಿಸ್ಟರ್ ಮಾಡುವುದಕ್ಕೂ ಒಪ್ಪುವುದಿಲ್ಲ, ಆಮೇಲೆ ಜುಡಿಶಿಯಲ್ ಎನ್‌ಕ್ವೈರಿ ಮಾಡಿಸಿರಿ ಅಂದರೆ ಅದಕ್ಕೂ ಒಪ್ಪುವುದಿಲ್ಲ, ಪರಿಹಾರ ಕೊಡುವುದಕ್ಕೂ ಒಪ್ಪುವುದಿಲ್ಲ ಅಂದರೆ, ಅದಕ್ಕೆ ನಾವು ಹೇಳಬೇಕಾಗುತ್ತದೆ, ಈ ಸರ್ಕಾರಕ್ಕೆ ಮೈಂಡ್ ಇಲ್ಲ, ಅಂದರೆ ಇದರಲ್ಲಿ ನಿಷ್ಪಕ್ಷಪಾತವಾದ ಎನ್‌ಕ್ವೈರಿ ಆಗಬೇಕು ಎನ್ನತಕ್ಕಂಥ ಮನಸ್ಸು ಇವರಿಗಿಲ್ಲ ಎಂದು ನನಗನ್ನಿಸುತ್ತದೆ. ಅಧ್ಯಕ್ಷರೇ, ಇದರಲ್ಲಿ ಏನಾಗುತ್ತದೆ ಅಂದರೆ, ಒಂದುವೇಳೆ ಪ್ರಾಮಾಣಿಕವಾಗಿ ಸತ್ಯ ಹೊರಗಡೆ ಬರಬೇಕು ಎಂಬ ಇಚ್ಛೆ ಅವರಿಗೆ ಇತ್ತು ಅಂದರೆ ಜುಡಿಶಿಯಲ್ ಪ್ರೋಬ್‌ಗೆ ಏಕೆ ಒಪ್ಪಬಾರದು. ಇದರ ಅರ್ಥ ಏನು ತೋರಿಸುತ್ತದೆ ಅಂದರೆ, ಇದನ್ನು ಮರ್ಡರ್ ಕೇಸ್ ಎಂದು ಇವರು ಒಪ್ಪುವುದಿಲ್ಲ. ಏಕೆಂದರೆ, ನಾಳೆ ಅವರ ಮೇಲೆ ಚಾರ್ಜ್‌ಶೀಟ್ ಹಾಕಬೇಕಾಗುತ್ತದೆ ಎಂದು ತಪ್ಪಿಸಿಕೊಳ್ಳುತ್ತಾ ಇದ್ದಾರೆ. ಜುಡಿಷಿಯಲ್ ಪ್ರೋಬ್ ಏಕೆ ಬೇಡ ಅನ್ನುತ್ತಾರೆ ಎಂದರೆ ಸತ್ಯಾಂಶ ಹೊರಗೆ ಬರುತ್ತದೆ ಎಂದು ತಪ್ಪಿಸಿಕೊಳ್ಳುತ್ತಾ ಇದ್ದಾರೆ. ಪೋಸ್ಟ್‌ಮಾರ್ಟಂ ಇನ್ನೊಂದು ಸಲ ಮಾಡಿದರೆ ತಿರುಗಿ ಪೋಲೀಸರ ಮೇಲೆ ಏನು ಆಪಾದನೆ ಬರುತ್ತದೋ ಎಂದು ಅನುಮಾನ. ಹೀಗಾಗಿ ಪೋಲೀಸರಿಗೆ ಪ್ರೊಟೆಕ್ಷನ್ ಮಾಡುವ ದೃಷ್ಟಿಯಿಂದ ಇವರು ಈ ರೀತಿ ಮಾಡುತ್ತಾ ಇದ್ದಾರೆ. ಇದನ್ನು ಪ್ರೊಟೆಸ್ಟ್ ಮಾಡಿ ನಾವು ವಾಕೌಟ್ ಮಾಡುತ್ತಾ ಇದ್ದೇವೆ.

(All the Congress (I) members staged a walk-out)

ಅಧ್ಯಕ್ಷರು.—ಈಗ ನಾನು ರೂಲಿಂಗ್ ಕೊಡುತ್ತೇನೆ. ಈಗ ನಾನು ಎರಡೂ ಕಡೆಯ ವಾದ ವನ್ನು ಕೇಳಿದ್ದೇನೆ. ಸರ್ಕಾರದವರು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಆದುದರಿಂದ ನಿಲುವಳಿ ಸೂಚನೆಗೆ ನನ್ನ ಅನುಮತಿಯನ್ನು ನಿರಾಕರಣೆ ಮಾಡಿದ್ದೇನೆ.